	೧೯ ಬಳ್ಳಾರಿ ಜಿಲ್ಲೆ :			
೧	ಬಳ್ಳಾರಿ	೨೩೯	೫೩	೭೮
೨	ಹರಪನಹಳ್ಳಿ	೨೦೮	೨	–
೩	ಹೊಸಪೇಟೆ	೧೭೬	೧೮	–
೪	ಹೂವಿನಹಡಗಲಿ	೩೧೫	೪೭	–
೫	ಕೊಟ್ಟೂರು	೧೩೮	೪೧	–
೬	ಸಿರಗುಪ್ಪ	೨೩	೧೫	–
೭	ಸಂಡೂರು	೫೨	೪೧	–
೮	ಹಗರಿಬೊಮ್ಮನಹಳ್ಳಿ	೮	೧	–
	ಒಟ್ಟು	೧೧೫೯	೨೧೮	೭೮

ಚೋಳನಾಯಕನಹಳ್ಳಿಗೆ ನೀರು ಪೂರೈಕೆ ಬಗ್ಗೆ

೪೨೭ (೮೮೧) ಶ್ರೀ ಎಂ. ಎಸ್. ಕೃಷ್ಣನ್(ರಾಜಾಜಿನಗರ).–ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚೋಳನಾಯಕನ ಹಳ್ಳಿಯಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

ಆ) ಈ ಕೊಳವೆ ಬಾವಿಗಳಿಗೆ ಸಬ್‌ಮರ್‌ಸಿಬಲ್ ಪಂಪ್‌ಗಳನ್ನು ಅಳವಡಿಸಿ ಊರಿನಾದ್ಯಂತ ಕೊಳವೆಗಳನ್ನು ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಇ) ಈ ಯೋಜನೆಗೆ ತಗುಲುವ ಅಂದಾಜು ವೆಚ್ಚವೆಷ್ಟು ?

ಈ) ಎಷ್ಟು ದಿನಗಳಲ್ಲಿ ಈ ಕಾರ್ಯವನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಸದ್ಯದಲ್ಲಿ ಕೈ ಪಂಪನ್ನು ಅಳವಡಿಸಿರುವ ಒಂದು ಕೊಳವೆ ಬಾವಿ ಇದೆ.

ಆ) ಈ ಹಳ್ಳಿಯಲ್ಲಿ ಈಗ ಇರುವ ಒಂದು ಕೊಳವೆ ಬಾವಿಗೆ ಸಬ್‌ಮರ್‌ಸಿಬಲ್ ಪಂಪನ್ನು ಅಳವಡಿಸುವ ಮತ್ತು ಇನ್ನೂ ಎರಡು ಕೊಳವೆ ಬಾವಿಗಳನ್ನು ಕೊರೆಸುವ ಮತ್ತು ನೀರಿನ ಕೊಳವೆಗಳನ್ನು ಹಾಕುವ ಬಗ್ಗೆ ಯೋಚಿಸಲಾಗಿದೆ.

ಇ) ಸುಮಾರು ೩,೭೫,೦೦೦ ರೂಗಳು.

ಈ) ಮೇಲ್ಕಂಡ ಯೋಜನೆಗೆ ಸಂಬಂಧಿಸಿದಂತೆ ಅಂದಾಜನ್ನು ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳವರಿಗೆ ಮೇಲು ರಜು ಮತ್ತು ಹಣ ಸಂದಾಯಕ್ಕಾಗಿ ರವಾನಿಸಲಾಗಿದೆ. ಬೆಂಗಳೂರು ಜಿಲ್ಲಾ, ಜಿಲ್ಲಾಧಿಕಾರಿಗಳಿಂದ ಹಣ ಸಂದಾಯವಾದ ಕೂಡಲೇ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.